35 1909 ಮಾರ್ಚಿ ಮತ್ತು ಏಪ್ರೆಲ್ ತಿಂಗಳುಗಳಲ್ಲಿ ಸ್ಯಾಂಗಿಷ್ಟ ಆದ ಕೆಲಸಗಳ ಪಟ್ಟಿಯನ್ನು ಓದಿ ಮಂಜೂರ್ಮಾಡಲಾಯಿತು.

36. ಈ ಕೆಳಗೆ ಕಂಡ ತಾಲ್ಲೂಕು ಬೋರ್ಡು ಪ್ರೊಸಿಡಿಂಗ್ಸುಗಳು ಓದಿ ರಿಕಾರ್ಡು ಮಾಡಲಾಯಿತು.

ಕೋಲಾರ	...	...	20—4—1909
ಶ್ರೀನಿವಾಸಪುರ	...	...	20—4—1909
ಚಿಂತಾಮಣಿ	...	...	24—4—1909
ಬಾಗೇಪಲ್ಲಿ	...	...	24—3—1909
ಡಿಟೋ	...	...	26—4—1909
ಚಿಕ್ಕಬಳ್ಳಾಪುರ	...	...	23—4—1909
ಗುಡಿಬಂಡೆ	...	...	31—3—1909
ಸಿಡ್ಲಘಟ್ಟ	...	...	5—3—1909
ಗೋರೀಬಿದನೂರು	...	...	20—2—1909
ಮಾಲೂರು	...	...	30—3—1909
ಡಿಟೋ	...	...	27—4—1909
ಬೌರಿಂಗ್‌ಪೇಟೆ	...	...	15—5—1909

37. 1909ನೆ ಆಗಸ್ಟು ತಾಹೆಯ 21ನೆ ತಾರೀಖು ಶನಿವಾರದ ದಿವಸ ಮುಂದಿನ ಮೀಟಿಂಗ್ ನಡೆಯುತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್.

ತುಮಕೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ ಸಾಹೇಬರವರ ಆಫೀಸ್.

ನೋಟೀಸ್.

ತಾರೀಖು 23ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ತುರುವೇಕೆರೆ 3ನೆ ಕ್ಲಾಸು ಮ್ಯಾವಲರ್ಸ್ ಬಂಗ್ಲೆ ಹಾಳಿರಿಪೇರಿ ಆಗುತ್ತಲಿರುವದರಿಂದ ಮತ್ತೊಂದು ನೋಟೀಸ್ ಕೊಡುವವರಿಗೂ ಪ್ರಯಾಣಸ್ಥರಿಗೆ ಅಲ್ಲಿ ಇಳಿದುಕೊಳ್ಳಲು ಅವಕಾಶವಿಲ್ಲಾ.

ಸಿ. ವೆಂಕಟರಾವ್, ಫಾರ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 21ನೆ ಜೂನ್ 1909.

1. ಕಂದಾಯದ ಬಾಕೀದಾರರಾದ ಜೋಡಿ ಹುಲ್ಲೆಕೆರೆ ಗ್ರಾಮದ 1. ನರಸಿಪ್ಪ ಘನಪಾಟಿ, 2. ಶ್ಯಾಮಾಜೋಯಿಸ, 3. ಕಿಂದಘಟ್ಟದ ರಾಮಂಣ, 4. ಬೆಳ್ಳೂರು ಶ್ರೀಕಂಠಯ್ಯ, 5. ನಾಗಮಂಗಲದ ಗುರಪ್ಪ, 6. ಭುವನೇಶ್ವರ ದೇವರು ವಗೈರೆಯವರಿಂದ ಬರಬೇಕಾದ ಜಪ್ತಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಆಗಸ್ಟು 7ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಸದರಿ ತಾರೀಖು ದಿವಸ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ' ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1909ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ ಚಾಲ್ತಿ ಸಾಲ್‌ಗೆ ರೂಪಾಯಿ 140—14—3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ವೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟು ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನರಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಸಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ	ಖಾತೆದಾರರ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಜಮೀನು. ಖುಷ್ಕಿ, ತರೀ ಯಾ ಬಾಗಾಯತು	ಜಮೀನು. ವಿಸ್ತೀರ್ಣ.	ಜಮೀನು. ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಕೊಡಬೇಕಾದ ಪೈಕಾಸು ಜೋಡಿ ಪೊಂಬುಲಗು.	ಸರ್ಕಾರಕ್ಕೆ ಕೊಡಬೇಕಾದ ಸೋ ಪೈಸೆ ಫೀ ಬಾಕಿ ಪೊಂಬುಲಗು.
ನಾಗಮಂಗಲ	ನಾಗಮಂಗಲ	ಜೋಡಿ ಹುಲ್ಲೆಕೆರೆ	1. ನರಸಿಹ್ಮ ಘನಪಾಪ್ಪ, 2. ಖಾನಾ ಜೋಯಿಸ, 3. ರಾಮಣ್ಣ, 4. ಶ್ರೀಕಂಠಯ್ಯ, 5. ಸೂರಪ್ಪ, 6. ಘನಪೇಕ್ಷರ ಪೈಕರು	...	...	...	ಖುಷ್ಕಿ ...	ಎ. ಗು. 304 3	ರೂ. ಆ. 337 4	ರೂ. 5,000	ರೂ. 119	ರೂ. ಆ. ಪೈ. 142 6 3 ವಸೂಲ್ ತಾರೀಖು ವರಿಗೆ ಬಡ್ಡಿ ಬರಬೇಕು.
							ಬಾಗಾಯತು	1 9	4 0			
							ಪರಂಪೋಕು	212 26	3 4			
								517 38	344 8			
										ಜಾಲ್ತಿಕೀ ಲಕ ಸಾಲ್ ಬಾಕಿ.	140 14 3
											283 4 6

ಎಸ್. ಪಿ. ರಾಜಗೋಪಾಲಾಚಾರ್,
ಛಾರ್ ಡೆಪ್ಯುಟಿ ಕಮಿಷನರ್.

1909ನೆ ಇಸವಿ ಮೇ ಮಾಹೆ 29ನೆ ಶನಿವಾರ ಪ್ರಾತಃಕಾಲ 7—30 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸಿನವರು, (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. ,, ಬಿ. ಸುಬ್ಬರಾಯರವರು, (ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್.
4. ,, ವಿ ಎಲ್. ಮಾಂಕರ್ರವರು, (ಮೈಸೂರು ಸಿಟಿ ಹೆಲ್ತ್ ಆಫಿಸರ್).
5. ,, ಸೈಯದ್ ಯಾಕೂಬ್. ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
6. ,, ಎಂ. ಸಿ. ರಂಗೈಯ್ಯಂಗಾರ್ರವರು.
7. ,, ಎ. ಸುಬ್ಬಣ್ಣನವರು.
8. ,, ಅಂಬಳೆ ಅಣಪಯ್ಯಪಂಡಿತರವರು.
9. ,, ಎಸ್. ಶ್ರೀಕಂಠಯ್ಯನವರು.
10. ,, ಎಂ. ನರಸುಂಹಸ್ವಾಮಿಗಳವರು.
11. ,, ಎಂ. ಕೃಷ್ಣಪ್ಪಾಜಿ ಅರಸಿನವರು.
12. ,, ವಿ. ತಿರುವೆಂಗಡ ಮೊದಲಿಯಾರ್ರವರು.
13. ,, ಎಂ ಸೈದ್ ಮೊಹದೀ ಸಾಹೇಬರವರು.
14. ,, ಎಂ. ಅನಂತರಾಜೈಯ್ಯನವರು.
15. ,, ರಹಿಮತ್ತುಲ್ಲಾ ಅಹಮ್ಮದ್‌ಸೇಟರವರು.
16. ,, ಮಾಪಪ್ಪನವರು
17. ರೆವರೆಂಡ್ ಹೆಚ್. ಗಲಿಫರ್ಡ್ ಸಾಹೇಬರವರು.